ದೆಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಘಟಪ್ರಭಾ ಬಲದಂಡೆ ಕಾಲುವೆಯಿಂದ ಈ ನೀರಾವರಿ ಪ್ರದೇಶಕ್ಕೆ ನೀರನ್ನು ಜೂನ್ ತಿಂಗಳವರೆಗೆ ಕೊಡುತ್ತೀರಾ ಎಂದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—1670 ಎಕರೆಗೆ ಕೋಚರಿ ಪೇಯರ್‌ನಿಂದ ಮತ್ತು 708 ಎಕರೆಗೆ ಆಣೆಕಟ್ಟಿನಿಂದ ನೀರು ಬರುತ್ತದೆ. ಈಗ್ಗೆ 20 ವರ್ಷಗಳ ಹಿಂದೆ ಮಹಾರಾಷ್ಟ್ರದವರು ಮಾಡಿದ ಕೆಲಸ ಇದು. ಇದು ಮಳೆಗಾಲದಲ್ಲಿ ಹೆಚ್ಚು ಪ್ರವಾಹ ಬಂದು ಪೂರ್ತಿಯಾಗಿ ತುಂಬಿ ಹರಿಯುತ್ತದೆ, ಮತ್ತು ಬೇಸಿಗೆಯಲ್ಲಿ ಬತ್ತಿಹೋಗುತ್ತದೆ. ಆದರೆ ಇದಕ್ಕೆ ಬೇರೆ ಕಡೆಯಿಂದ ನೀರನ್ನು ತರುವ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಆ ಭಾಗದ ಕಬ್ಬಿನ ಪ್ರದೇಶದಿಂದ ಕೂಡ ಈ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಬರುತ್ತಿದೆ. ಆಲ್ಲಿ 3 ತಿಂಗಳವರೆಗೆ ನೀರು ಇಲ್ಲದೇ ಹೋದರೆ ಅಲ್ಲಿನ ಕಬ್ಬು ಬೆಳಿಗಾರರಿಗೆ ಬಹಳ ನಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಲ್ಲಿ ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ. ಒಂದೇ ಒಂದು ಕಾಲುವೆಯಲ್ಲಿ ನೀರನ್ನು ಕೊಚೆರಿ ಮತ್ತು ಗೋಟೂರು ವೇಯರ್‌ಗೆ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೆ ಎನ್ನುವ ಬಗ್ಗೆ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಗಮನಿಸಿದ್ದೇನೆ. ಈ ಬಗ್ಗೆ ಈ ಸದನದಲ್ಲೇ ಖಚಿತವಾದ ಉತ್ತರವನ್ನು ಮುಂದಿನ ದಿನಗಳಲ್ಲಿ ನಾನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sub : Lift Irrigation scheme at Ingli village, Chikodi Taluk, Belgaum District

Qn No . 165(504) Sri A.A. Nimbalkar(Sadalga).—will the Minister of State for Minor Irrigation be pleased to state that :—

a) When the L. I scheme at Ingli village Taluk Chikodi District Belgaum was started ;

b) The amount spent on it ;

c) Whether the scheme has been completed ?

Sri R. N Lakshmipathy (Minister of State for Minor Irrigation.— a) February 1976 b) Rs. 18,89,917.27.

c) Project is under execution.

Hon'ble Member Absent

ವಿಷಯ : ಹರಪನ ಹಳ್ಳಿ ತಾಲ್ಲೂಕು ನೀರಾವರಿ ಯೋಜನೆ ಬಗ್ಗೆ

ಪ್ರಶ್ನೆ. 164(547) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನ ಹಳ್ಳಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ : —

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಕೈಕೊಂಡ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ;

ಆ) ಇವುಗಳಲ್ಲಿ ಪೂರ್ತಿಗೊಂಡಿರುವ ಹಾಗೂ ಪೂರ್ತಿಗೊಳ್ಳದಿರುವ ಯೋಜನೆಗಳ ಸಂಖ್ಯೆ ಎಷ್ಟು;

ಉತ್ತರ ಶ್ರೀ ಆರ್. ಎನ್ ಲಕ್ಷ್ಮೀಪತಿ ಸಣ್ಣ ನೀರಾವರಿ ಸಚಿವರು.—

ಅ) 1978 ರಿಂದ ಈಚೆಗೆ 25

ಆ) ಪೂರ್ಣಗೊಂಡ ಯೋಜನೆಗಳು 23, ಪೂರ್ಣಗೊಳ್ಳದಿರುವ ಯೋಜನೆಗಳು 2.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ, ಅರಸೀಕೆರೆಯ ಕೆಲಸ 2 ವರ್ಷದಿಂದ ಹಾಗೇ ನಿಂತಿದೆ. ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.— ಹಲವಾಗಿಲು, ದುಗ್ಗಾವತಿ ಈ ಎರಡು ಕೆರೆಗಳು ಇನ್ನೂ ಪೂರ್ತಿ ಆಗಿಲ್ಲ. ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ 43 ಕೆರೆಗಳ ಪೈಕಿ 23 ಕೆರೆಗಳ ಕೆಲಸ ಪೂರ್ತಿ ಆಗಿದೆ. ಅರಸೀಕೆರೆ ಕೆರೆಯ ವಿಚಾರಕ್ಕೆ ಸಂಬಂದಪಟ್ಟಂತೆ ಮಾಹಿತಿಗಳು ಈಗ ನನ್ನ ಹತ್ತಿರ ಇಲ್ಲ.

ಅಧ್ಯಕ್ಷರು.— ಚು. ಪ್ರ. 165 (504)

ಮಾನ್ಯ ಸದಸ್ಯರು ಹಾಜರಿಲ್ಲ.

ವಿಷಯ : ಕೃಷ್ಣ ಮೇಲ್ದಂಡೆ ಯೋಜನೆ.

ಪ್ರಶ್ನೆ : 166(160) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—